ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆರವರು ಕಸಬಾ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಮೇಲನ ಹಳ್ಳಿ ಗ್ರಾಮ ಸರ್ವೇ ನಂ.98 ರಲ್ಲಿ 5 ಎರಕೆ ಜಮೀನು ಮಂಜೂರಾತಿ ಮಾಡಿರುತ್ತಾರೆ. ಮಂಜೂರಾದ ಜಮೀನು ಗುಡ್ಡ ಪ್ರದೇಶವಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿಲ್ಲದ ಕಾರಣ ಅದೇ ಗ್ರಾಮ ಸರ್ವೇ ನಂ.98 ರಲ್ಲಿ 5 ಎಕರೆ ಜಮೀನನ್ನು ಮಂಜೂರಾತಿ ಮಾಡಲು ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಕೋರಿದ್ದಾರೆ. ಆ ಜಮೀನು ಮಂಜೂರಾಗುವ ನಿರೀಕ್ಷೆಯಲ್ಲಿದೆ.

ಇ) ಜಮೀನು ಲಭ್ಯವಾಗಿ ಇಲಾಖೆಗೆ ಹಸ್ತಾಂತರಿಸಿದ ತಕ್ಷಣ 15 ತಿಂಗಳೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಸತಿ ಶಾಲೆಯನ್ನು ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಗುವುದು.

ಈ) ಹೌದು.

ಉ) ಕಟ್ಟಡದ ಅಂದಾಜು ವೆಚ್ಚ ಸುಮಾರು ರೂ.462/– ಲಕ್ಷಗಳಾಗಲಿದ್ದು, ಈ ಹಣವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

537 ಶ್ರೀ ಮಾಡಾಳ್ ವಿರೂಪಾಕ್ಷಪ್ಪ ಕೆ. (ಚೆನ್ನಗಿರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚೆನ್ನಗಿರಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟು ವರ್ಷಗಳಿಂದ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ; (ವಿವರ ಒದಗಿಸುವುದು)

ಇ) ಯಾವಾಗ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗುವುದು;

ಈ) ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರ, ಸಂತೇಬೆನ್ನೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಕೋಗಲೂರು ಇಲ್ಲಿ ವೈದ್ಯಾಧಿಕಾರಿಗಳ

ಹುದ್ದೆಗಳು ಖಾಲಿಯಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಪ್ರಾಥಮಿಕ ಆರೋಗ್ಯ ಕೇಂದ್ರ, ಹೂದಿಗೆರೆ – 1,

ಚಿರಡೋಣಿ –1, ವೈದ್ಯಾಧಿಕಾರಿಗಳ ಹುದ್ದೆಗಳು 2 ವರ್ಷಗಳಿಂದ ಖಾಲಿ ಇವೆ.

ಪ್ರಾಥಮಿಕ ಆರೋಗ್ಯ ಕೇಂದ್ರ ತಣಿಗೆರೆ, ಬಸವಾಪಟ್ಟಣ, ಕೊಂಡದಹಳ್ಳಿ ಇಲ್ಲಿನ ವೈದ್ಯಾಧಿಕಾರಿಗಳು 2009ರ ಸ್ನಾತಕೋತ್ತರ ವ್ಯಾಸಂಗಕ್ಕೆ ಹೋಗಿರುವುದರಿಂದ 4 ತಿಂಗಳಿಂದ ಖಾಲಿ ಇದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಕೊಗಲೂರು–1, ಕಗತೂರು–1 ವೈದ್ಯರು 5 ತಿಂಗಳಿನಿಂದ ಅನಧಿಕೃತ ಗೈರುಹಾಜರಾಗಿರುತ್ತಾರೆ.

ಸಮುದಾಯ ಆರೋಗ್ಯ ಕೇಂದ್ರ ತಾವರೆಕೆರೆಯಲ್ಲಿ ಒಂದು ವೈದ್ಯರ ಹುದ್ದೆ ಒಂದು ವರ್ಷದಿಂದ ಹಾಗೂ ಕೆರೆಬಿಳಚಿ 1, ಹಾಗೂ ಸಂತೆಬೆನ್ನೂರು–3 ವೈದ್ಯರ ಹುದ್ದೆಗಳು ನಾಲ್ಕು ತಿಂಗಳಿನಿಂದ ಖಾಲಿ ಇವೆ.

ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿಯಲ್ಲಿ 2 ತಜ್ಞರ ಹುದ್ದೆಗಳು 5 ತಿಂಗಳಿಂದ ಖಾಲಿ ಇವೆ.

ಇ) ಮತ್ತು ಈ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಆದ್ಯತೆ ಮೇರೆಗೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

2010ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ತಜ್ಞ ವೈದ್ಯರುಗಳಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ತಜ್ಞ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲಾಗುವುದು.